ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

...ನೇ ವರ್ಷ 32ನೇ ಸಂಚಿಕೆ ಕೊಪ್ಪ 5-5-1985 ಭಾನುವಾರ ಬೆಲೆ 20 ಪೈಸೆ

ಜನರ ಒತ್ತಾಯ: ಮದ್ಯದಂಗಡಿ ಲೈಸೆನ್ಸ್ ಇಲ್ಲ

ಚಿಕ್ಕಮಗಳೂರು: ಇಲ್ಲಿನ ವಿಜಯಪುರ ಬಡಾವಣೆಯ ಜನನಿಬಿಡಪ್ರದೇಶದಲ್ಲಿ ಬ್ರಾಂದಿ ಅಂಗಡಿಯೊಂದನ್ನು ತೆರೆಯಲು ಲೈಸೆನ್ಸ್ ನೀಡಹೊರಟಿದ್ದ ಅಧಿಕಾರಿಗಳು ಅನಂತರ ಜನರ ಪ್ರತಿರೋಧಕ್ಕೆ ಮಣಿದು ಲೈಸೆನ್ಸ್ ನೀಡಲು ನಿರಾಕರಿಸಿದ ಘಟನೆ ವರದಿಯಾಗಿದೆ.

ಚಿಕ್ಕಮಗಳೂರು ಪಟ್ಟಣದಾದ್ಯಂತ ಬ್ರಾಂದಿ ಅಂಗಡಿಗಳು ಹೆಚ್ಚಿ ನಾಗರಿಕರಿಗೆ ತೊಂದರೆಗೆ ಕಾರಣವಾಗುತ್ತಿರುವ ಹಿನ್ನೆಲೆಯಲ್ಲಿ, ಸದರಿ ಅಂಗಡಿ ತೆರೆಯುವುದನ್ನು ಸ್ಥಳೀಯ ಯುವಕ ಸಂಘವೊಂದು ವಿರೋಧಿಸುತ್ತ ಬಂದಿತ್ತು. ಆದರೂ ಅಂಗಡಿ ತೆರೆಯುವ ಸಿದ್ಧತೆಗಳು ಭರದಿಂದ ನಡೆಯುತ್ತಿರುವುದನ್ನು ಗಮನಿಸಿ ಏ.22 ರಂದು ಸಾರ್ವಜನಿಕರ ಬೃಹತ್ ಪ್ರತಿಭಟನಾ ಪ್ರದರ್ಶನ ಏರ್ಪಡಿಸಲಾಗಿತ್ತು.

ಅದೇ ಸಂದರ್ಭದಲ್ಲಿ ಸ್ಥಳ ಪರಿಶೀಲನೆಗೆ ಬಂದ ಅಬಕಾರಿ ಅಧಿಕಾರಿಗಳು ಜನರ ಒಕ್ಕೊರಲಿನ ಅಭಿಪ್ರಾಯಕ್ಕೆ ಬೆಲೆಕೊಟ್ಟು ಲೈಸೆನ್ಸನ್ನು ನಿರಾಕರಿಸಿದರೆಂದು ವರದಿಯಾಗಿದೆ.

ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಪಂಚಾತಿಕೆ:

...ಶೃಂಗೇರಿಯ ಗೋರಿ ವಿವಾದಕ್ಕೆ ಅಂತಿಮ ತೆರೆ

...ಹಾವು-ಕಪ್ಪೆ ಒಡನಾಡಿದಲ್ಲಿ ಮನುಷ್ಯ-ಮನುಷ್ಯ ಒಂದಾಗಲಿಲ್ಲ!

ಶೃಗೇರಿ: ಇಲ್ಲಿನಗೋರಿಗೆ ಹೋಗುವ ಮೆಟ್ಟಿಲ ದಾರಿಯ ಬಗ್ಗೆ ಹಲವು ವರ್ಷ...ಳಿಂದ ಇಲ್ಲಿನ ಮುಸ್ಲಿಮರಿಗೂ, ವೆಂಕಟರಮಣ ದೇವಸ್ಥಾನದವರಿಗೂ ನಡೆಯು...ದ್ಧ ವಿವಾದವೊಂದು ಜಿಲ್ಲಾಧಿಕಾರಿಗಳ ಮಧ್ಯಸ್ಥಿಕೆಯಲ್ಲಿ ಪಂಚಾತಿಕೆಯ ...ಮೂಲಕ ಬಗೆಹರಿದಂತಾಗಿದೆ.

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಮುಸ್ಲಿಂ ಪ್ರವಾದಿಯೊಬ್ಬರ ಸಮಾಧಿ ...ಎಂದು ನಂಬಿಕೆಯಿರುವ ಈ ಗೋರಿಗೆ ...ಬ್ರಾಹ್ಮಣೇತರ ಹಿಂದುಗಳೂ ಸಹ ...ಡೆದು ಕೊಳ್ಳುತ್ತಾರೆ. ಇಲ್ಲಿ ಕಳೆದ ಹತ್ತು ವರ್ಷಗಳಿಂದ ಪ್ರತಿ ಮೂರು ವರ್ಷಕ್ಕೊಮ್ಮೆ ಉರುಸ್ ನಡೆದುಕೊಂಡು ಬರುತ್ತಿದ್ದು, ಮೇಲ್ಕಂಡ ವಿವಾದ ಹಿಂದು–ಮುಸ್ಲಿಂ ಕೋಮು ಬಣ್ಣ ಕಟ್ಟಿಕೊಂಡು 1982 ರಲ್ಲಿ ಗಲಾಟೆಯಾಗಿ ಲಾಠಿಚಾರ್ಜು ...ಹ ಆದಲ್ಲಿಂದೀಚೆಗೆ ಮುಸ್ಲಿಮರ ಎಲ್ಲ ಹಬ್ಬ...ಗಳೂ ಪೋಲೀಸ್ ಬಂದೋಬಸ್ತಿನಲ್ಲಿ ನಡೆಯುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ವಿವಾದದ ಪರಿಹಾರದ ಜೊತೆಗೆ ಎರಡೂ ...ಕೋಮುಗಳವರಲ್ಲಿ ದ್ವೇಷ ಉಳಿದುಕೊಂಡು ...ರುವುದನ್ನೂ ತಪ್ಪಿಸುವ ಉದ್ದೇಶದಿಂದ ...ಜಿಲ್ಲಾಧಿಕಾರಿಗಳು ಏ.27ರಂದು ಈ ಪಂಚಾ...ತಿಕೆ ಏರ್ಪಡಿಸಿದ್ದರು.

ವಿವಾದದ ಹಿನ್ನಲೆ

ಹಿಂದೆ ಶೃಂಗೇರಿ ಜಹಗೀರಿ ತಾಲ್ಲೂಕ್ ...ಆಗಿದ್ದಾಗ ಚಂದ್ರಶೇಖರ ಭಾರತಿಯವರ ಕಾ...ಲದಲ್ಲಿ ಈ ಗುಡ್ಡದಲ್ಲಿ ಗೋರಿ ನಿರ್ಮಿಸಲು ...ಅವಕಾಶ ಕೊಟ್ಟಿದ್ದರೆನ್ನಲಾಗಿದೆ. ಅಲ್ಲಿಗೆ ಹೋಗಲು ಈ ಕಾಲುದಾರಿ ಮಾತ್ರ ಇದ್ದು. ಆದನ್ನೂ ಸೇರಿಸಿ ಕೆಲವು ವರ್ಷಗಳ ಹಿಂದೆ ಪುರಸಭೆ ಆ ನಿವೇಶನವನ್ನು ವೆಂಕಟರಮಣ ದೇವಸ್ಥಾನಕ್ಕೆ ಮಂಜೂರು ಮಾಡಿತು. ಅಲ್ಲಿಂದ ಗಲಾಟೆ ಆರಂಭವಾಗಿ ವಿವಾದ ಹೈಕೋರ್ಟಿನಲ್ಲಿ ಇದೆ.

ಸೈಟಿನಲ್ಲಿ ಬಹಳ ಮುಂದಿನವರೆಗೂ ಗುಡ್ಡದ ಕಾಲು ಬಂದಿದ್ದು. ವೆಂಕಟರಮಣ ದೇವಸ್ಥಾನದವರು ಸೈಟು ಮಟ್ಟ ಮಾಡುವ ನೆಪದಲ್ಲಿ ಗೋರಿಯಿರುವ ಕಾಕದಾಳಿ ಮಣ್ಣಿನ ಗುಡ್ಡವನ್ನು ಪೂರ್ತಿ ನಾಶಗೊಳಿಸುವ ಭೀತಿ ಮುಸ್ಲಿಮರದಾಗಿತ್ತು. ಇದರಲ್ಲಿ ಸತ್ಯಾಂಶವೂ ಇತ್ತು. ಹೀಗಾಗಿ ಹೈಕೋರ್ಟ್ ತಡೆಯಾಜ್ಞೆ, ಅದೂ ಇದೂ ಎಂದು ಕಾಲ ಕಳೆಯುತ್ತಿತ್ತು.

ಅಷ್ಟು ಹೊತ್ತಿಗೆ ವಿಶ್ವಹಿಂದೂ ಪರಿಷತ್ತಿನ ಸ್ವಾಮಿ ವಿಶ್ವಾನಂದ ಎಂಬವರು ಈ ಜಾಗದಲ್ಲಿ ಒಂದು ಕಲ್ಯಾಣ ಮಂಟಪ ಕಟ್ಟಿಸಿದರೆ ಹೇಗೆ ಎಂದು 'ಯೋಜನೆ' ಹಾಕಿ, ಆದಕ್ಕೆ ಶೃಂಗೇರಿ ಮಠದ ಆಶ್ರಯವನ್ನೂ ಪಡೆದು ಭಾರತೀ ಟ್ರಸ್ಟ್ ಎಂದು ಮಾಡಿಕೊಂಡರಂತೆ. ಹೀಗೆ, ಗೌಡಸಾರಸ್ವತರಿಗೂ ಮುಸ್ಲಿಮರಿಗೂ ಆರಂಭವಾದ ವಿವಾದ ಹಿಂದೂ – ಮುಸ್ಲಿಂ ವಿವಾದವೆನ್ನಿಸಿಕೊಂಡು ಈಗ ಮಠದ ಪ್ರಭಾವವೂ ಈ ಪ್ರಕರಣದೊಳಗೆ ಪ್ರವೇಶಿಸಿದಂತಾಯಿತು.

(3ನೇ ಪುಟಕ್ಕೆ)

ಕೊಪ್ಪದಲ್ಲಿ ಮಣ್ಣು ಪರೀಕ್ಷಾ ಘಟಕ ಸ್ಥಾಪನೆ ಪರಿಶೀಲಿಸುವ ಭರವಸೆ

ಕೊಪ್ಪ: ಇಲ್ಲಿನ ತೋಟಗಾರಿಕೆ ಇಲಾಖೆಯಲ್ಲಿ ಮಣ್ಣು ಪರೀಕ್ಷಾ ಘಟಕವೊಂದನ್ನು ತೆರೆಯಬೇಕೆಂಬ ಕೋರಿಕೆಯನ್ನು ಕೃಷಿ ಇಲಾಖೆಯೊಂದಿಗೆ ಚರ್ಚಿಸಿ, ಆ ಬಗ್ಗೆ ವ್ಯವಸ್ಥೆ ಮಾಡುವುದಾಗಿ ತೋಟಗಾರಿಕೆ ಇಲಾಖೆಯ ನಿರ್ದೇಶಕರಾದ ಸಿ.ಎಸ್. ಪುಲ್ಲಯ್ಯ ಭರವಸೆ ನೀಡಿದ್ದಾರೆ.

ಏ. 27 ರಂದು ತೋಟಗಾರಿಕೆ ಕಚೇರಿ ಆರಂಭೋತ್ಸವದ ಸಂದರ್ಭದಲ್ಲಿ ಅಂದಗಾರಿನ ಅಭಿನವ ಯುವಕ ರೈತ ಸಂಘ ಸಲ್ಲಿಸಿದ ಮನವಿಗೆ ಉತ್ತರಿಸುತ್ತ ಅವರು ಈ ಭರವಸೆ ಕೊಟ್ಟರು.

ಹಣ್ಣು, ತರಕಾರಿ, ತೆಂಗುಮುಂತಾದ ಸಸಿಗಳನ್ನು ಸ್ಥಳೀಯವಾಗಿ ಬೆಳೆಸಿ ಹಂಚಲು ವ್ಯವಸ್ಥೆ ಮಾಡಲಾಗುತ್ತಿದೆಯೆಂದರು.

ಕಾಫಿ ಮಂಡಳಿಯಂತೆಯೇ ಸ್ಥಾಪಿಸಲ್ಪಟ್ಟಿರುವ 'ಸಾಂಬಾರ ಪದಾರ್ಥಗಳಮಂಡಳಿ'(ಸ್ಪೈಸಸ್ ಬೋರ್ಡ್) ಅಡಿಕೆ, ಏಲಕ್ಕಿ, ಮೆಣಸು, ಮೆಣಸಿನಕಾಯಿ, ಮುಂತಾದುವುಗಳ ಬಗ್ಗೆ ಗಮನ ನೀಡುತ್ತದೆಂದೂ ಅವರು ತಿಳಿಸಿದರು. ತೆಂಗಿನಕಾಯಿ ನಿರುಪಯುಕ್ತವಾಗಿ ಉದುರಿ ಹೋಗುವ ಸಮಸ್ಯೆಯ ಬಗ್ಗೆ ನೀರು, ಪೊಟ್ಯಾಶ್ ಗೊಬ್ಬರಗಳನ್ನು (ಬೇಸಿಗೆಯಲ್ಲಿ) ಯಥೇಚ್ಛವಾಗಿ ಕೊಡಲು ತಿಳಿಸಿ, ಮತ್ತೇನಾದರೂ ಕಾಯಿಲೆಇದೆಯೆ ಎಂದು ಕೃಷಿ ವಿ.ವಿ. ಯಲ್ಲಿ ವಿಚಾರಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ತೋಟಗಾರಿಕೆಮಂತ್ರಿಯೊಡನೆ ಅಡಿಕೆ ಬೆಳೆಗಾರರ ಸಂಘದ ನಿಯೋಗದ ಭೇಟಿ

ಕೊಪ್ಪ: ಏ. 27 ರಂದು ಭೇಟಿ ನೀಡಿದ್ದ ತೋಟಗಾರಿಕೆ ಮಂತ್ರಿ ಬಿ. ಸೋಮಶೇಖರ್ ಅವರನ್ನು ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ನಿಯೋಗ ಭೇಟಿ ಮಾಡಿ ಸಮಸ್ಯೆಗಳನ್ನು ಚರ್ಚಿಸಿತು. 1983 ರ ಬೇಸಿಗೆಯಲ್ಲಿ ಅಡಿಕೆ ತೋಟಗಳಿಗೆ ಆದ ನಷ್ಟಕ್ಕೆ ಪರಿಹಾರ ಕುರಿತು ತಮ್ಮ ಅಸಹಾಯಕತೆ ವ್ಯಕ್ತಪಡಿಸಿದ ಸಚಿವರು, ಅಡಿಕೆ ಮತ್ತು ತೆಂಗಿನ ಸಸಿಗಳನ್ನು ತೋಟಗಾರಿಕೆ ಕೇಂದ್ರದಲ್ಲಿ ಬೆಳೆಸಿ ಲಾಭ–ನಷ್ಟವಿಲ್ಲದ ದರದಲ್ಲಿ ರೈತರಿಗೆ ಹಂಚಲು ವ್ಯವಸ್ಥೆ ಮಾಡುವುದಾಗಿ ಭರವಸೆ ಕೊಟ್ಟರು.

ವಾರ್ತಾ ಇಲಾಖೆ ನಿರ್ದೇಶಕರಿಗೆ ಪತ್ರಕರ್ತರ ಸಂಘದ ಮನವಿ

ಚಿಕ್ಕಮಗಳೂರು: ರಾಜ್ಯದ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರು ಈಚೆಗೆ ಇಲ್ಲಿಗೆ ಭೇಟಿಕೊಟ್ಟಿದ್ದಾಗ ಜಿಲ್ಲಾ ಪತ್ರಕರ್ತರ ಸಂಘ ಅವರನ್ನು ಸಂಧಿಸಿ ಜಿಲ್ಲಾ ಮತ್ತು ಗ್ರಾಮಾಂತರ ಪತ್ರಿಕೆಗಳ ಸಮಸ್ಯೆಗಳನ್ನು ಅವರಿಗೆ ವಿವರಿಸಿ, ಅವನ್ನು ಬಗೆಹರಿಸಲು ಅವರನ್ನು ಒತ್ತಾಯಿಸಿತು.

ಕೊರ್ಡಿಹಿತ್ಲಿನಲ್ಲಿ ಸಿ. ಪಿ. ಐ. ಕಾರ್ಯಕರ್ತರ ಮೇಲೆ ಹಲ್ಲೆ

ಕೊಪ್ಪ: ಇಲ್ಲಿಗೆ ಸಮೀಪದ ಕೊರ್ಡಿಹಿತ್ಲಿನಲ್ಲಿ ಸಿ.ಪಿ.ಐ. ಪಕ್ಷದ ಕಾರ್ಮಿಕರ ಸಂಘಟನೆ ಹೊಸದಾಗಿ ಬೆಳೆಯುತ್ತಿದ್ದು, ಮೇ 4 ರಂದು ಈ ನಿಮಿತ್ತ ಅಲ್ಲಿಗೆ ಹೋದ ತನ್ನ ಮೇಲೆ ಮಣಿ ಯೂನಿಯನ್ ನವರೆನ್ನಲಾದ 50 ಕ್ಕೂ ಹೆಚ್ಚು ಜನ ಕಾರ್ಮಿಕರು ಕತ್ತಿ ದೊಣ್ಣೆಗಳಿಂದ ಹಲ್ಲೆ ಮಾಡಲು ಯತ್ನಿಸಿದ್ದಲ್ಲದೆ ಹುಸೇನ್ ಸಾಬ್, ಗುರುಬಸಪ್ಪ ಮತ್ತು ಸಿದ್ದಲಿಂಗಪ್ಪ ಎಂಬ ಕಾರ್ಮಿಕರ ಮೇಲೆ ಹಲ್ಲೆ ನಡೆಸಿದ್ದಾಗಿ ಎ.ಐ.ಟಿ.ಯು.ಸಿ. ಕಾರ್ಯದರ್ಶಿ ರಾಮಚಂದ್ರ ತಿಳಿಸಿದ್ದಾರೆ. ಈ ಸಂಬಂಧ ಪೋಲೀಸರಿಗೆ ದೂರು ನೀಡಲಾಗಿದೆ.

ಕೊಪ್ಪ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಕ್ಷೇತ್ರದಲ್ಲಿ ಕಳೆದ ವರ್ಷ 1.5 ಕೋಟಿ ರೂ. ಕಾಮಗಾರಿ

ಬೇಗಾರು: ಕಳೆದ ಸಾಲಿನಲ್ಲಿ ಶೃಂಗೇರಿ ಕ್ಷೇತ್ರದಲ್ಲಿ 1.5 ಕೋಟಿ ರೂ. ಗಳ ವಿವಿಧ ಅಭಿವೃದ್ಧಿ ಕಾಮಗಾರಿಗಳು ನಡೆದಿರುವುದಾಗಿ ಸಚಿವ ಗೋವಿಂದ ಗೌಡರು ಇಲ್ಲಿ ತಿಳಿಸಿದರು.

ಅವರು ಈಚೆಗೆ ಇಲ್ಲಿನ ನೂತನ ಪಶುವೈದ್ಯ ಆಸ್ಪತ್ರೆಯ ಕಟ್ಟಡವನ್ನು ಉದ್ಘಾಟಿಸಿದರು. ವಿಾಗ ಚಂದ್ರಶೇಖರ್ ಅಧ್ಯಕ್ಷತೆ ವಹಿಸಿದ್ದರು. ಕಚ್ಚೋಡಿ ಶ್ರೀನಿವಾಸ್, ಕಲಿಗೆ ಸಂಜೀವ ಗೌಡ ಮುಖ್ಯ ಅತಿಥಿಗಳಾಗಿದ್ದರು.

ಡಾ|| ಪರಮೇಶ್ವರರ ಪದವಿಗಳ ಕಿರೀಟಕ್ಕೆ ಇನ್ನೊಂದು ಗರಿ

ಬೆಂಗಳೂರು: ಇಲ್ಲಿನ ಖ್ಯಾತ ಹೃದ್ರೋಗ ತಜ್ಞರಾದ ಡಾ|| ವಿ. ಪರಮೇಶ್ವರ ಅವರಿಗೆ ಲಂಡನ್ನಿನ ಪ್ರತಿಷ್ಠಿತ ರಾಯಲ್ ಕಾಲೇಜ್ ಆಫ್ ಫಿಜಿಶಿಯನ್ಸ್ ಸಂಸ್ಥೆ ತನ್ನ ಫೆಲೋಶಿಪ್ (ಎಫ್.ಆರ್.ಸಿ.ಪಿ.) ನೀಡುವ ಮೂಲಕ ಅವರ ಪದವಿ, ಪ್ರಶಸ್ತಿಗಳ ಕಿರೀಟಕ್ಕೆ ಇನ್ನೊಂದು ಗರಿ ಸಿಕ್ಕಿಸಿದೆ.

ಡಾ|| ಪರಮೇಶ್ವರ ಶೃಂಗೇರಿಯಮಾವಾಸ್ತವ್ಯರು, ದೇಶ–ವಿದೇಶಗಳಲ್ಲಿ ಖ್ಯಾತಿ ಪಡೆದ ಹೃದ್ರೋಗ ತಜ್ಞರಾಗಿದ್ದಾರೆ.

...ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 5-5-1985

ಸರಕು:	2801 – 3066
ಬೆಟ್ಟೆ:	2330 – 2530
ಗೊರಬಲು:	2000 – 2189

...ಸಕಲೇಶಪುರ ಏಲಕ್ಕಿ ಧಾರಣೆ

...ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
...3.4.85	302	201
...4.4.85	180	62
...5.4.85	296	170
...6.4.85	287	179

ಮೆಣಸಿನಹಾಡ್ಯ ಗಿರಿಜನ ಹಳ್ಳಿಯಲ್ಲಿ ಸರ್ಕಾರದ ತೀವ್ರ ಪ್ರಚಾರ ಆಂದೋಲನದ ಸಭೆ

— ಒಂದು ವಿಮರ್ಶೆ

ರಾಜ್ಯ ಸರ್ಕಾರ ತನ್ನ ಸಾಧನೆಗಳನ್ನು, ಮುಖ್ಯವಾಗಿ ಬಡವರ್ಗಗಳು, ರೈತರು, ಸಾಮಾನ್ಯ ಜನತೆ—ಇವರಿಗಾಗಿ ತಾನು ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳನ್ನು ಆ ಜನರಲ್ಲಿ ಪ್ರಚಾರ ಮಾಡಲು ಪ್ರತಿ ವರ್ಷ ತೀವ್ರ ಪ್ರಚಾರ ಆಂದೋಲನ ಎಂಬ ಕಾರ್ಯಕ್ರಮ ನಡೆಸುತ್ತಿದೆ.

ಅದೇ ರೀತಿ, ವಾರ್ತಾ ಮತ್ತು ಪ್ರಚಾರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ನೆಹರು ಯುವಕ ಕೇಂದ್ರ ಮತ್ತು ಶಿವಮೊಗ್ಗದ ಕ್ಷೇತ್ರ ಪ್ರಚಾರ ಇಲಾಖೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಕೊಪ್ಪ, ನ. ರಾ. ಪುರ ಮತ್ತು ಶೃಂಗೇರಿ ತಾ||ಗಳ ಗಿರಿಜನ ಕಾಲೋನಿಗಳಲ್ಲಿ ಏ. 27 ರಿಂದ 30ರ ವರೆಗೆ ಇಂಥ ಕಾರ್ಯಕ್ರಮ ಹಾಕಿಕೊಂಡಿದ್ದು, ಅದರ ಉದ್ಘಾಟನೆ 27 ರಂದು ಕೊಪ್ಪ ತಾಲ್ಲೂಕಿನ ಮೆಣಸಿನ ಹಾಡ್ಯ ಗಿರಿಜನ ಹಳ್ಳಿಯಲ್ಲಿ ನಡೆಯಿತು.

ಮೆಣಸಿನ ಹಾಡ್ಯ

ಅತ್ಯಂತ ಹಿಂದುಳಿದ ಗಿರಿಜನ ಪಂಗಡಗಳಲ್ಲೊಂದಾದ 'ಗೌಡಲು' ಪಂಗಡದ ಸುಮಾರು 28—ಕುಟುಂಬಗಳಿರುವ ಹಳ್ಳಿ ಅಥವಾ 'ಕೊಡಿಗೆ' ಯೇ ಮೆಣಸಿನಹಾಡ್ಯ. ಶಾಂತಿ ಗ್ರಾಮದಿಂದ ಸುಮಾರು 9 ಕಿ.ಮೀ. ಅಥವಾ ಬಸರಿಕಟ್ಟೆಯಿಂದ ಸುಮಾರು 12 ಕಿ. ಮೀ. ದೂರದಲ್ಲಿ ಬೆಟ್ಟಗುಡ್ಡಗಳ ನಡುವೆ ಇರುವ ದುರ್ಗಮವಾದ ಈ ಹಳ್ಳಿಯಲ್ಲಿ ಹಿಂದಿನಿಂದ ಒಂದು ಪ್ರಾಥಮಿಕ ಶಾಲೆಯಿದ್ದು, ಈಗ ಒಂದು ಅಂಗನವಾಡಿಯೂ ನಡೆಯುತ್ತಿದೆ.

ಇಲ್ಲಿಗೆ ಬರಲು ಈವರೆಗೆ ರಸ್ತೆಯಿರಲಿಲ್ಲ. ಶಾಂತಿಗ್ರಾಮದಿಂದ ಅಷ್ಟೂದೂರ ನಡೆದುಕೊಂಡು, ಸಾಮಾನು—ಸರಂಜಾಮು ಇದ್ದರೆ ತಲೆಹೊರೆಯಲ್ಲಿ ಹೊತ್ತುಕೊಂಡು ಹೋಗಬೇಕಿತ್ತು. ಕಾಯಿಲೆಯವರನ್ನು ಜೋಲಿಯಲ್ಲಿ ಹೊತ್ತುಕೊಂಡು ಶಾಂತಿಗ್ರಾಮಕ್ಕೆ ಹೋಗಬೇಕಿತ್ತು.

ಕೆಲವೇ ವರ್ಷಗಳ ಹಿಂದೆ ಇಲ್ಲಿ ಯಾರೂ ವಿದ್ಯಾವಂತರಿರಲಿಲ್ಲ. ಒಂದು ಕಾರ್ಡು ಬಂದರೆ ಅದು ನೆಂಟರದ್ದೇ, ಸರ್ಕಾರದಿಂದ ಬಂದಿದ್ದೇ, ತಿಳಿಯುತ್ತಿರಲಿಲ್ಲ. ಅದನ್ನು ಓದಿಸಿ ತಿಳಿಯಲು ಐದು ಮೈಲಿ ದೂರ ಹೋಗಬೇಕು. ಅವರು ಸಿಗದಿದ್ದರೆ ಪುನಃ ಹೋಗಬೇಕಿತ್ತು.

ಈಗ ಇಲ್ಲಿ ಹಲವು ಜನ ವಿದ್ಯಾವಂತರಿದ್ದಾರೆ.ಇಬ್ಬರು ಬಿ.ಎ.,ಬಿ.ಕಾಂ., ಪದವೀಧರರು,ಪಿಯುಸಿ.ಎಸ್ಸೆಸ್ಸೆಲ್ಸಿ ಆದ ಹಲವರು, ಶಾಲೆಕಾಲೇಜುಗಳಲ್ಲಿ ಓದುತ್ತಿರುವ ಹಲವರೂಇದ್ದಾರೆ. (ಇಡೀ ಇವರ ಜನಾಂಗದಲ್ಲಿ ಇರುವ ಮೂರೇ ಜನ ಪದವೀಧರರಲ್ಲಿಇನ್ನೊಬ್ಬಾಕೆ ಮೂಡಿಗೆರೆ ಬಳಿಯ ಹಳ್ಳಿಯೊಂದರಲ್ಲಿದ್ದಾರೆ.) ಒಬ್ಬಿಬ್ಬರು ಗ್ರಾಮದ ಮುಖಂಡರು ಕೆಲವು ವರ್ಷಗಳ ಹಿಂದೆ ಮಾಧ್ಯಮಿಕ ಮತ್ತು ಪ್ರೌಢಶಾಲೆಗೆ ಕಳಿಸಿದರೆ ಉಚಿತ ಊಟ, ಬಟ್ಟೆ ಕೊಟ್ಟು ವಿದ್ಯಾಭ್ಯಾಸ ಮಾಡಿ[illegible]ರೆ ಎಂದು ಇವರನ್ನು ಉತ್ತೇಜಿಸಿದ್ದ[illegible]ದ್ಯಾಭ್ಯಾಸದ ಆಸಕ್ತಿ ಎರಡು—ಮೂರು ಜನ ಹುಡುಗರಲ್ಲಿ ಬೆಳೆದು ಕಷ್ಟಪಟ್ಟು ಅವರು ಪ್ರೌಢಶಾಲೆ ಮುಗಿಸಿದರು. ಅಂಥವರಲ್ಲಿ ಒಬ್ಬರು ಶೇಷಯ್ಯ.

ಈಗ ಇಲ್ಲಿಗೆ ಕೇಂದ್ರ ಸರ್ಕಾರದ ಗಿರಿಜನ ಅಭಿವೃದ್ಧಿ ಯೋಜನೆಯಲ್ಲಿ 10 ಲಕ್ಷ ರೂ. ವೆಚ್ಚದಲ್ಲಿ 6 ಕಿ.ಮೀ.ಉದ್ದದ ಒಂದು ರಸ್ತೆ ಆಗುತ್ತಿದೆ. ಇದು ಈ ಹಳ್ಳಿಯನ್ನು ಕೊಗ್ರೆ—ಕಲ್ಲುಗುಡ್ಡೆ – ಬಿಳಲುಕೊಪ್ಪ ಲೋ।। ಇಲಾಖೆ ರಸ್ತೆಗೆ ಸೇರಿಸುತ್ತದೆ. ಈ ರಸ್ತೆ ಈಗ ಹಳ್ಳಿಯ ಶಾಲೆಯವರೆಗೆ ಆಗಿದ್ದು, ಮೋರಿಗಳು ಮತ್ತಿತರ ದುರಸ್ತಿ ಕೆಲಸ ಆಗುತ್ತಿದೆ. ಜಲ್ಲಿ ಆಗಬೇಕಾಗಿದೆ. ಮುಂದೆ ಈ ಹಳ್ಳಿಯ ಮೂಲಕ ಇದೇ ರಸ್ತೆ ಮುಂದುವರಿಸಿ ಹೊರನಾಡನ್ನು ಮುಟ್ಟುವ ಕಾಮಗಾರಿಯೂ ಆಗುತ್ತಿದೆ.

ಶೇಷಯ್ಯ ಮತ್ತು ಅವರ ಸಹಪಾಠಿಗಳ ಪ್ರಯತ್ನದಿಂದಾಗಿ ಇಲ್ಲಿ ಈಗ ಹಲವು ಮಕ್ಕಳು ಪ್ರೌಢಶಾಲೆ, ಕಾಲೇಜುಗಳಲ್ಲಿ ಕಲಿಯುತ್ತಿದ್ದಾರೆ. ಹಳ್ಳಿಯ ಎಲ್ಲ ಅರ್ಹ ಮಕ್ಕಳೂ ಶಾಲೆಗೆ ಹೋಗುತ್ತಿದ್ದಾರೆ.

ವಿವಿಧ ಇಲಾಖೆಗಳಲ್ಲಿ ಗಿರಿಜನರಿಗಾಗಿ ಇರುವ ಎಲ್ಲ ಯೋಜನೆಗಳ ಫಲಕನನ್ನೂ ಈ ಹಳ್ಳಿಗೆ ಪಡೆದುಕೊಳ್ಳಲು ಶೇಷಯ್ಯ ಮತ್ತು ಅವರ ಗೆಳೆಯರು ಶ್ರಮಿಸುತ್ತಿದ್ದು, ಈವರೆಗೆ 18 ಇಲಾಖೆಗಳಿಂದ ಸವಲತ್ತುಗಳನ್ನು ಪಡೆದು ಸದುಪಯೋಗಪಡಿಸಿಕೊಳ್ಳಲಾಗುತ್ತಿದೆಯೆಂದು ಅವರು ಹೇಳುತ್ತಾರೆ.

ಕೊರತೆಗಳು

ಇಷ್ಟೆಲ್ಲ ಆದರೂ ಇದೆಲ್ಲ ಇನ್ನೂ ಆರಂಭ ಮಾತ್ರ. ಇಲ್ಲಿನ ಕೊರತೆಗಳು ಇನ್ನೂ ಬೇಕಾದಷ್ಟಿವೆ. ಇಲ್ಲಿನ ಜನ, ಮುಖ್ಯವಾಗಿ ಯುವಕರು, ತಾವು ವಿದ್ಯಾವಂತರಾಗಬೇಕು, ಮುಂದುವರಿಯಬೇಕು, ಸರ್ಕಾರ ನೀಡಿರುವ ಸೌಲತ್ತುಗಳನ್ನೆಲ್ಲ ಪಡೆದುಕೊಳ್ಳಬೇಕು ಎಂಬ ಪ್ರಜ್ಞೆ ಬೆಳೆಸಿಕೊಂಡಿರುವುದು ಮಾತ್ರ ಇವನ್ನು ಮುನ್ನಡೆಸಬಲ್ಲ ಪ್ರೇರಕ ಶಕ್ತಿ.

ಇವರಲ್ಲಿ ಎಲ್ಲರಿಗೂ ಜಮೀನಿಲ್ಲ ಕೆಲವರಿಗೆ ಒಂದು, ಎರಡು ಎಕರೆ ಜಮೀನಿದೆ. ಮತ್ತೆ ಕೆಲವರು ಬಹಳ ಹಿಂದಿನಿಂದ ಬಗರ್‌ಹುಕುಂ ಸಾಗುವಳಿ ಮಾಡಿದ್ದು, 1957 ರಷ್ಟು ಹಿಂದೆಯೇ ಒಂದು—ಒಂದೂವರೆ ಸಾವಿರ ರೂ. ವರೆಗೆ ಟಿ. ಟಿ. ಕಟ್ಟಿದ್ದಾರಂತೆ. ಇನ್ನು ಕೆಲವರು ಹೊಸದಾಗಿ ದರ್ಖಾಸ್ತ್ ಮಾಡಿ, ಜಮೀನು ಸಾಗುವಳಿ ಮಾಡುತ್ತಿದ್ದಾರೆ. ದರ್ಖಾಸ್ತ್ ರಿಕಾರ್ಡೆಲ್ಲ ಮಾಡಿಸಿಯಾಗಿದೆ. ಆದರೆ ಇವರಾರಿಗೂ ಸಾಗುವಳಿ ಚೀಟಿ ಸಿಕ್ಕಿಲ್ಲ. ಎಷ್ಟೇ ಸೌಲತ್ತುಗಳಿದ್ದರೂ ಸಾಗುವಳಿ ಚೀಟಿಯಿಲ್ಲದವರಿಗೆ ಏನೂಸಿಗುವುದಿಲ್ಲ.

ಇನ್ನೊಂದು ಮುಖ್ಯ ಸಮಸ್ಯೆ—ವಿದ್ಯಾವಂತರಿಗೆ ಉದ್ಯೋಗದ್ದು. ಯಾರಿಗೂ ಸಾಕಷ್ಟು ಭೂಮಿ ಇಲ್ಲದ್ದರಿಂದ ಸೌಲತ್ತುಗಳ ನಡುವೆಯೂ ಕೆಲವರಿಗೆ ಓದು ಮುಂದುವರಿಸಲು ಆಗುವುದಿಲ್ಲ. ಹೀಗೆ ಇಬ್ಬರು ಪದವೀಧರರು, ಎಸ್ಸೆಸ್ಸೆಲ್ಸಿ, ಪಿ. ಯು. ಸಿ. ಇತ್ಯಾದಿ ಓದಿದ ಹಲವು ಹುಡುಗರು ಇದ್ದಾರೆ. ಇವರಿಗೆಲ್ಲ ಸರಿಯಾದ ಉದ್ಯೋಗ ಸಿಕ್ಕಿಲ್ಲ. ಸಂದರ್ಶನಕ್ಕೆ ಹಾಜರಾದರೆ ಇವರ ಹತ್ತಿರ ಸಹ ಐದು,ಹತ್ತುಸಾವಿರ ರೂ.ಕೇಳಿದ ಸಂದರ್ಭಗಳಿವೆಯಂತೆ.

ಕೊಗ್ರೆ ಬಳಿಯ ಕರಡಿ ಹಳ್ಳಕ್ಕೆ ಒಂದು ಸೇತುವೆ,ಹಳ್ಳಿಗೆ ಮಂಜೂರಾಗಿರುವ ವಿದ್ಯುದ್ದೀಪ ಶೀಘ್ರ ಹಾಕಿಸಿಕೊಡುವುದು ಇವೂ ಕೆಲವು ಬೇಡಿಕೆಗಳು.

ಕುಡಿಯುವ ನೀರಿಗೆ ಈಗ ಹಳ್ಳದನೀರು, ಮಾಡಿನ ಮಳೆಯ ನೀರು ಇವೇ ಮೂಲ. ಗುಡ್ಡದ ನೆತ್ತಿಯಲ್ಲಿ ಸರಲು ಹರಿಯುತ್ತಿದೆ. ಅದನ್ನು ಸರಿಯಾಗಿ ಬಳಸಿಕೊಂಡರೆ ಸ್ವಲ್ಪವೇ ಖರ್ಚಿನಲ್ಲಿ ಊರಿಗೆ ಕುಡಿಯುವ ಶುದ್ಧ ನೀರು ಒದಗಿಸಬಹುದು. ಇದೂ ಬೇಡಿಕೆಗಳಲ್ಲೊಂದು.

ಹೀಗೆ, ಏಳಿಗೆ ಹೊಂದಬೇಕೆಂಬ ಅದಮ್ಯ ಆಸೆ ಹಾಗೂ ಅದಕ್ಕಿರುವ ಕೊರತೆ, ಅಡ್ಡಿಗಳು—ಇವುಗಳ ಮಧ್ಯೆ ಈ ಹಳ್ಳಿ ನಿಧಾನವಾಗಿ ಅರಳಲು ಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಅಂದಿನ ಕಾರ್ಯಕ್ರಮ ಸ್ವಲ್ಪ ವಿಮರ್ಶಿಸೋಣ.

ಯೋಜನೆಗಳ ಬಗ್ಗೆ ವಿವರಣೆ ನೀಡಿದವರಿಲ್ಲ

ಪ್ರಚಾರ ಆಂದೋಲನ ಎಂದಾಗ ಗಿರಿಜನರಿಗಾಗಿ ಸರ್ಕಾರದ ಬಳಿಯಿರುವ ಸೌಲತ್ತುಗಳು ಏನೇನು, ಅವುಗಳನ್ನು ಪಡೆಯಲು ಬೇಕಾದ ಅರ್ಹತೆ ಏನು, ಪಡೆಯುವ ಬಗೆ ಹೇಗೆ—ಈ ವಿಷಯಗಳನ್ನು ಸಾಧ್ಯವಿದ್ದಷ್ಟು ವಿವರವಾಗಿ ತಿಳಿಯಪಡಿಸಬಹುದೆಂದು ನಾವು ಅಂದುಕೊಂಡಿದ್ದರೆ, ಅಂಥ ವಿವರಣೆಗಳನ್ನು ಯಾರೂ ನೀಡಲಿಲ್ಲ. ಬರಿದೇ, ಸರ್ಕಾರ ನಿಮಗೆ ಅದು ಮಾಡಿದೆ, ಇದು ಮಾಡಿದೆ, ಅಷ್ಟು ಕೊಟ್ಟಿದೆ—ಇಷ್ಟು ಕೊಟ್ಟಿದೆ ಎಂಬರ್ಥದ ಮಾತುಗಳು ಮಾತ್ರ ಕೇಳಿಬಂದವು.

ಹಿಂದುಳಿದ ವರ್ಗಗಳವರ ಅಭಿವೃದ್ಧಿಯ ಕಾರ್ಯಕ್ರಮಗಳು ಬಡಜನರ ಒಂದು ಶ್ರಾದ್ಧ ಕರ್ಮದಂತಾಗದೆ, ಇಡೀ ಸಮಾಜದ ಅಭಿವೃದ್ಧಿಯ ಒಂದು ಅವಿಭಾಜ್ಯ ಅಂಗ, ಆತ್ಮೀಯ ಚಟುವಟಿಕೆ ಆಗಬೇಕು. ಸರ್ಕಾರವು ಅವರ ಹತ್ತಿರ ಹೋಗಿ ನಿಮಗಾಗಿ ಅಷ್ಟು ಕೋಟಿ ಖರ್ಚು ಮಾಡಿದ್ದೇವೆ, ಇಷ್ಟು ಕೋಟಿ ಮಾಡಿದ್ದೇವೆ, ಅಲ್ಲಿ ಆ ಸೌಲಭ್ಯ ಕೊಟ್ಟಿದ್ದೇವೆ, ಇಲ್ಲಿ ಈ ಯೋಜನೆ ಕೊಟ್ಟಿದ್ದೇವೆ— ಎಂದು ಲೆಕ್ಕ ಹೇಳಿ ಬರುವ ಬದಲು ಅವರಿಗಾಗಿ ಇರುವ ಯೋಜನೆ, ಸೌಲತ್ತುಗಳು, ಅವನ್ನು ಪಡೆಯುವ ವಿಧಾನ ಇವುಗಳನ್ನು ತಿಳಿಸಿ ಹೇಳಿ, ಅವನ್ನು ಪಡೆಯಲು ಇರುವ ತೊಡಕುಗಳನ್ನು ನಿವಾರಿಸಿ ನೆರವಾಗಬೇಕು.

ಅದಕ್ಕಾಗಿ ಈ ವಿಮರ್ಶೆ

ಸ್ವಾಗತ ಭಾಷಣ ಮಾಡಿದ ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿ ಡಿ. ರಾಮಾಸ್ವಾಮ್ಯ್ ಕೂಡ ಆ ಕೆಲಸ ಮಾಡಲಿಲ್ಲ. ಜಿಲ್ಲೆಯಲ್ಲಿ ವಿವಿಧ ಇಲಾಖೆಗಳು ಈವರೆಗೆ ಗಿರಿಜನರಿಗೆ ನೀಡಿರುವ 2ಕೋಟಿ 14 ಲಕ್ಷ ರೂ. ಮೌಲ್ಯದ ವಿವಿಧ ಸವಲತ್ತುಗಳ ಸಂಕ್ಷಿಪ್ತ ಮಾಹಿತಿ ನೀಡಿದರು. ಹಾಗೂ ಜಿಲ್ಲೆಯಲ್ಲಿ ಯಾವ್ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಗಿರಿಜನ ಕುಟುಂಬಗಳಿವೆ ಎಂಬುದನ್ನು (ಮೂಡಿಗೆರೆ—800, ಕೊಪ್ಪ—470, ಶೃಂಗೇರಿ—178, ನ.ರಾ. ಪುರ—150, ಚಿಕ್ಕಮಗಳೂರು ತಾ।।ಬಿಂಡಿಗಾದಲ್ಲಿ ಹಕ್ಕಿಪಿಕ್ಕಿಯ 13) ತಿಳಿಸಿದರು.

ಹೆಗ್ಗಳಿಕೆ

ಸಾಮಾನ್ಯವಾಗಿ ಹೊರಗಿನವರು ಬರುವುದೇ ಅಸಾಧ್ಯವೆನ್ನಿಸುವ ಈ ಕುಗ್ರಾಮಕ್ಕೆ ಬಂದ ಮೊಟ್ಟಮೊದಲ ಮಂತ್ರಿ ಎಂದು ಗೋವಿಂದ ಗೌಡರು ಹೆಮ್ಮೆಪಟ್ಟದ್ದು ಅಸಹಜವೇನಲ್ಲ. "15 ವರ್ಷಗಳ ಹಿಂದಿನ ಈ ಹಳ್ಳಿಗೂ ಇಂದಿಗೂ ಹೋಲಿಸಿದಾಗ, ಸರ್ಕಾರ ಮತ್ತುಅಧಿಕಾರಿಗಳು ಮನಸ್ಸು ಮಾಡಿದರೆ ಏನೂ ಸಾಧಿಸಬಹುದು" ಎಂದು ಅವರು ಹೇಳಿದುದೂ ಸಮಂಜಸ. ಆದರೆ, ಒಂದು ರಸ್ತೆ ಆಗಿ ಜೀಪು—ಕಾರು—ಅಧಿಕಾರಿಗಳೊಂದಿಗೆ ಒಬ್ಬ ಮಂತ್ರಿ ಬಂದುದಕ್ಕೇ ಈ ಹಳ್ಳಿ

ಸಿರಿಮನೆ ನಾಗರಾಜ್

ಭಾರಿ ಪ್ರಗತಿ ಸಾಧಿಸಿದಂತೆ ಎಂದುಕೊಂಡು "ಗಾಂಧೀಜಿ ಹೇಳಿದ ರಾಮರಾಜ್ಯವೆಂದರೆ ಇದೇ...." ಮುಂತಾಗಿ ಅವರು ಹೇಳಿದ್ದು ಮಾತ್ರ ಭಾವುಕತೆಯ ಪರಮಾವಧಿ. ಒಂದು ಹಳ್ಳಿ ಬೆಳವಣಿಗೆ ಹೊಂದುತ್ತಿರುವ ಸಂತೋಷ ಮಾತ್ರವಾದರೆ ಹೀಗೆಲ್ಲ ಮಾತಾಡಿಸಬಾರದು.

ಜಿಲ್ಲಾ ವೈದ್ಯಾಧಿಕಾರಿ ಡಾ।। ನಂಜುಂಡಯ್ಯನವರಿಗೆ ಸಮಾರಂಭದ ಪ್ರಶಸ್ತ ಚಪ್ಪರ, ಸ್ವಲ್ಪ ಒಳ್ಳೆಯ ಬಟ್ಟೆ ಹಾಕಿಕೊಂಡು ಚಂದವಾಗಿ ಕಾಣುತ್ತಿದ್ದ ಕೆಲವು ಹುಡುಗ-ಹುಡುಗಿಯರ ಮಧ್ಯೆ ಅಳುತ್ತಿದ್ದ ತಾಯಂದಿರು, ಮಕ್ಕಳು, ನಡುವಯಸ್ಸು ಮೀರಿದ ಗಂಡಸರು – ಇವರುಗಳ ಅಪೌಷ್ಟಿಕತೆ (ಮಾಲ್ ನ್ಯೂಟ್ರಿಷನ್) ಗಮನಕ್ಕೆ ಬಂದಂತೆ ಕಾಣಲಿಲ್ಲ. ಆದರೆ ಅವರು ಆಡಿದ ಒಂದು ಭರವಸೆಯ ಮಾತು— "ಇಲ್ಲಿಗೆ ಹತ್ತಿರವಾಗಿ ಒಂದು ಆರೋಗ್ಯ ಘಟಕವೇ ಅಗತ್ಯವೆನ್ನಿಸುತ್ತದೆ. ಆದರೆ ಕಡೇಪಕ್ಷ ಒಬ್ಬ ಆರೋಗ್ಯ ಕಾರ್ಯಕರ್ತೆಯನ್ನಾದರೂ (ಎ ಎನ್ ಎಂ ಸೆಂಟರ್) ಕೊಡಿಸಲು ಸರ್ಕಾರಕ್ಕೆ ಶಿಫಾರಸು ಮಾಡುತ್ತೇನೆ"— ಮಂತ್ರಿಗಳ ಎದುರೇ ಹೇಳಿದ ಈ ಮಾತಾದರೂ ಬೇಗ ಕಾರ್ಯರೂಪಕ್ಕೆ ಬರಬೇಕು.

ಜಿಲ್ಲಾಧಿಕಾರಿಗಳು,"ಇಲ್ಲಿನ ರಸ್ತೆ ಚೆನ್ನಾಗಿ ಆಗಿದೆ. ಅಂದರೆ ಒಂದು ಇಲಾಖೆ ಚೆನ್ನಾಗಿ ಕೆಲಸ ಮಾಡಿದೆ ಎಂದಾಯಿತು. ನಮ್ಮ ಎಲ್ಲಾ ಇಲಾಖೆಗಳೂ ಹೀಗೇ ಚೆನ್ನಾಗಿ ಕೆಲಸ ಮಾಡಬೇಕು.ಜಿಲ್ಲೆಯಲ್ಲಿ ಈವರೆಗೆ ಗಿರಿಜನರಿಗಾಗಿ ಖರ್ಚುಮಾಡಿರುವ 2 ಕೋಟಿಗೂ ಹೆಚ್ಚು ಹಣದ ಪೂರ್ತಿ ಪ್ರಯೋಜನ ನಿಜವಾಗಿಯೂ ಅವರಿಗೆ ಸಿಕ್ಕಿರುತ್ತಿದ್ದರೆ

(3ನೇ ಪುಟಕ್ಕೆ)

ಓದುಗರ ಪತ್ರ

ಮಾಮ್‌ಕೋಸ್ ಧೋರಣೆ?

ಮಾನ್ಯರೆ,

ಶಿವಮೊಗ್ಗದ 'ಮಾಮ್‌ಕೋಸ್'ನವರು ಕಳೆದ ಸಾಲಿನ ನೈಲುತುತ್ತ ಉಳಿದಿದ್ದನ್ನು ಮಾರಬಾರದಾಗಿ ತಮ್ಮ ಶಾಖೆಗಳಿಗೆ ಆದೇಶಿಸಿರುವುದಾಗಿ ತಿಳಿದುಬಂದಿದೆ.

ಸದರಿ ಸಂಘದ ಸದಸ್ಯರಾದ ನಮಗೆ ವಾರ್ಷಿಕ ಕೇವಲ 12% ಡಿವಿಡೆಂಡ್ ಮತ್ತು ಅಡಿಕೆ ಮಾರಿ ನಿಂತ 1 ತಿಂಗಳಿನ ಹಣಕ್ಕೆ ಮಾತ್ರ ಶೇ. 7-1/2 ಯಂತೆ ಬಡ್ಡಿ, ಇಷ್ಟೆ. ಆದೇ ಅಲ್ಲಿನ ನೌಕರರಿಗೆ ಬೋನಸ್ ವಗೈರೆ ಸಕಲ ಸೌಲತ್ತು ಉಂಟು. ಒಂದು ವೇಳೆ ಹಳೆಯ ತುತ್ತ ಕೊಂಚ ಕಡಿಮೆ ದರಕ್ಕೆ ಸದಸ್ಯರಿಗೆ ಕೊಡುವ ಮನಸ್ಸು ಸಂಘಕ್ಕಿಲ್ಲ. ಕೇವಲ ಲಾಭ ಗಳಿಸಿ ನೌಕರರ ಯೋಗಕ್ಷೇಮ ಮಾತ್ರ ಅವರ ಜವಾಬ್ದಾರಿಯೆ? ಸದಸ್ಯರು ನಷ್ಟ ಹೊಂದಲು ಮಾತ್ರವೆ? ಇದು ಸಂಘದ ಧೋರಣೆಯೆ?

ಕಾನಳಿ ಲಕ್ಷ್ಮೀನಾರಾಯಣಪ್ಪ
ಕೊಪ್ಪ ತಾ||

ಭಗ್ನಗೊಂಡ ಕೋಮು ಸೌಹಾರ್ದದ ಕನಸು

(ಮೊದಲ ಪುಟದಿಂದ)

ಮುಸ್ಲಿಮರು ಗೋರಿಯ ಸುತ್ತ 14 ಗುಂಟೆ ಜಾಗ ಕೇಳಿದ್ದರು. ಅದನ್ನು ಮಂಜೂರಾಗಗೊಡದೆ ಅವರ ಗೋರಿಯನ್ನೇ ಅಲ್ಲಿಂದ ಜಾಗ ಬಿಡಿಸುವ ಒಳಾಂತರದ ಯತ್ನವೂ ನಡೆಯಿತು (ಅಥವಾ ಮುಂದುವರಿಯಿತು.) ಆ ಗುಡ್ಡವನ್ನು ನೆಲಸಮ ಮಾಡಿ ಪುರಸಭೆಗೆ ನಿವೇಶನ ಮಾಡುವ ನಿರ್ಣಯ ಮಾಡಲಾಯಿತು. ಕಡೆಗೆ ಮುಸ್ಲಿಮರಿಗೆ ಗೊತ್ತಾಗದಂತೆ ಆ ಇಡೀ ಗುಡ್ಡವನ್ನು, ತಾ||ಕಚೇರಿಯ 'ಮಿನಿ ವಿಧಾನಸೌಧ' ಕಟ್ಟಲು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಯಿತು. ಅವರು ಗುಡ್ಡ ಮಟ್ಟ ಮಾಡುವಾಗ ಲೋಡುಗಟ್ಟಲೆ ಮಣ್ಣು ಗೋರಿಯ ಬಳಿ ಸುರಿಯಿತು.

ರಾಜಕೀಯ ತಿರುವು

ಹಿಂದೂ-ಮುಸ್ಲಿಂ ಇಬ್ಬರ ಓಟೂ ಬೇಕಿದ್ದ ರಾಜಕಾರಣಿಗಳು ಜಾಗ ಮಂಜೂರು ಆಗಲೂ ಬಿಡದೆ, ವಿವಾದವನ್ನೂ ಇತ್ಯರ್ಥಗೊಳಿಸುವ ಯೋಗ್ಯತೆಯಿಲ್ಲದೆ ಕಣ್ಣು ಮುಚ್ಚಾಲೆಯಾಡಿದರು. ಈ ಮಧ್ಯೆ 1982 ರ ಉರುಸ್ ವೇಳೆಗೆ ಕೆಲವು ಮೂರ್ಖ ರಕ್ತದಾಹಿಗಳು ಉದ್ವಿಗ್ನತೆ ಹಬ್ಬಿಸಿ, ಗಲಾಟೆಯಾಗುವ ಪರಿಸ್ಥಿತಿ ಉಂಟುಮಾಡಿದರು. ಜಿಲ್ಲಾ ಪೋಲೀಸ್‌ಮುಖ್ಯಾಧಿಕಾರಿಯಾಗಿದ್ದ ಮಸಳಿ ಗಲಾಟೆಯಾಗದಂತೆ ಧಾರ್ಮಿಕ ಕಾರ್ಯ ನಡೆಯಗೊಡುವ ಜಾಣ್ಮೆ ಸಾಲದೆ, ವಿನಾ ಕಾರಣ ಎನ್ನಬಹುದಾದ ರೀತಿಯಲ್ಲಿ ಗುಡ್ಡದಿಂದಿಳಿಯುತ್ತಿದ್ದ ಜನರ ಮೇಲೆ ಲಾಠಿ ಚಾರ್ಜ್ ಮಾಡಿದ್ದಲ್ಲದೆ, ಕೆಳಗಿನಿಂದ ಯಾರೂ ಮೇಲೆ ಹೋಗದಂತೆ ತಡೆದರು. ಕೆಲವು ಸಾವಿರ ಹಿಂದೂ-ಮುಸ್ಲಿಂ ಭಕ್ತಾದಿಗಳ ಅನ್ನಸಂತರ್ಪಣೆಗಾಗಿ ಮಾಡಿದ್ದ ಅಡಿಗೆಯೆಲ್ಲವನ್ನೂ ನಾಯಿಗಳಿಗೆ ಹಾಕಬೇಕಾಯಿತು.

ಈ ಎಲ್ಲ ವಿದ್ಯಮಾನಗಳು ಕ್ಷೇತ್ರದ ರಾಜಕೀಯಕ್ಕೆ ಭಾರೀ ತಿರುವು ನೀಡಿದವು. 1982 ರ ವಿಧಾನ ಸಭಾ ಚುನಾವಣೆಯಲ್ಲಿ ಮೂರೂ ತಾ||ಗಳ ಮುಸ್ಲಿಮರು ಒಗ್ಗಟ್ಟಾಗಿ ಬೇಗಾನೆ ರಾಮಯ್ಯನವರನ್ನು ಕೆಡವಿದರು ಎನ್ನಬಹುದು.

ಆದರೆ, ಮುಖ್ಯವಾಗಿ ಇದರಿಂದಲೇ ಆರಿಸಿ ಬಂದ ಗೋವಿಂದಗೌಡರಿಂದಲೂ ಮುಸ್ಲಿಮರಿಗೆ ಲಾಭವಾಗಲಿಲ್ಲ. ಅವರ 14 ಗುಂಟೆಯ ಬೇಡಿಕೆ ಮಂಜೂರಾಗಲಿಲ್ಲ. ಆದರೆ ಕಳೆದ ವರ್ಷದ ಉರೂಸ್ ಮಾತ್ರ ಯಾವ ಆತಂಕವೂ ಇಲ್ಲದೆ ನಡೆಯಿತು. ಕೆಲವು ಮುಸ್ಲಿಮರು ಇದರ ಶ್ರೇಯಸ್ಸನ್ನು ಗೋವಿಂದ ಗೌಡರಿಗೆ ಕಟ್ಟಿದರು. ಈ ಎರಡರ ಫಲವೂ 1985ರ ಚುನಾವಣೆಯಲ್ಲಿ ವ್ಯಕ್ತವಾಯಿತು (ಗೌಡರು ಮುಸ್ಲಿಮರಿಗೆ ನೀಡಿದ್ದ ಇನ್ನೆರಡು ಭರವಸೆಗಳಾದ ಹೆಣ ಹೂಳುವ ಜಾಗ ಮಂಜೂರಾತಿ ಮತ್ತು ಗೋರಿಯ ಬಳಿ ಸುರಿದಿದ್ದ ಮಣ್ಣಿನ ರಾಶಿ ತೆಗೆಸುವಿಕೆ-ಇವೆರಡೂ ಇನ್ನೂ ಬಾಕಿ ಇವೆ.)

ಪಂಚಾತಿಕೆ

ಏ.27 ರಂದು ಪಂಚಾತಿಕೆ ನಡೆದಾಗ ಭಾರತೀ ಟ್ರಸ್ಟ್‌ನ ಪರವಾಗಿ ವಿಶ್ವಾನಂದರು ಮತ್ತು ಊರಿನ ಪ್ರಮುಖ ಶ್ರೀಮಂತರು- ಪ್ರಭಾವಿಗಳು ಭಾಗವಹಿಸಿದ್ದರೆ, ಮುಸ್ಲಿಮರ ಪರವಾಗಿ ಇದ್ದ ಒಬ್ಬಿಬ್ಬ ಶ್ರೀಮಂತರೂ ಭಾಗವಹಿಸಿರಲಿಲ್ಲ. ಭಾಗವಹಿಸಿದ್ದವರೆಲ್ಲ ಒಂದಿಲ್ಲೊಂದು ರೀತಿ ಮೇಲ್ಕಂಡವರ ನೆರಳಲ್ಲಿರುವವರು. ಜೊತೆಗೆ ಕನಿಷ್ಠ ವಿದ್ಯಾವಂತರು. ಈ ಅಂಶಗಳೂ ಕೂಡ ವಾದ-ಪ್ರತಿವಾದಗಳಲ್ಲಿ ಪ್ರಭಾವ ಬೀರಿದವೆನ್ನಬಹುದು.

ಹಲವು ಸುತ್ತು ಚರ್ಚೆಯ ನಂತರ ಮುಸ್ಲಿಮರು, "ನಮಗೆ ಮೆಟ್ಟಿಲಿಗಾಗಿ ಕೇವಲ ಒಂದು ಅಥವಾ ಒಂದೂವರೆ ಅಡಿ ಜಾಗ ಬಿಟ್ಟುಕೊಡಿ ಸಾಕು. ನಾವು ಕಲ್ಯಾಣ ಮಂಟಪಕ್ಕಾಗಿ 25 ಸಾವಿರ ರೂ. ಸಂಗ್ರಹಿಸಿ ಕೊಡುತ್ತೇವೆ. ಅದರ ಕಟ್ಟಡದ ಕೆಲಸಕ್ಕೆ ಬರುತ್ತೇವೆ. ಮತ್ತೆಲ್ಲ ರೀತಿಯಲ್ಲೂ ಆ ಕಾರ್ಯಕ್ಕೆ ಸಹಕಾರ ಕೊಡುತ್ತೇವೆ." ಎಂಬ ಕೋರಿಕೆಯಿಟ್ಟರು. ಆದರೆ ಈ 25 ಸಾವಿರ ರೂಪಾಯಿಯ ಪ್ರಸ್ತಾಪವನ್ನು ತಪ್ಪಾಗಿ ಅರ್ಥೈಸಿದ ಟ್ರಸ್ಟ್ ಪರ ವಾದಿಗಳು "ನಿಮಗೆ 50 ಸಾವಿರ ರೂ. ಕೊಡುತ್ತೇವೆ. ಗೋರಿಯನ್ನೇ ಗುಡ್ಡದಿಂದ ತೆಗೆಯಿರಿ" ಎಂದರು. ಇದರಿಂದ ಸ್ವಲ್ಪ ಹೊತ್ತು ಬಿಸಿ ಮಾತುಗಳು ನಡೆದವು. ಅಂತೂ ಟ್ರಸ್ಟ್‌ನವರು ಮೆಟ್ಟಿಲು ಜಾಗ ಬಿಡಲು ಒಪ್ಪಲಿಲ್ಲ.

ಒಪ್ಪಂದ

ಅಂತೂ ಇಂತೂ ಕೊನೆಗೊಂದು ಒಪ್ಪಂದಕ್ಕೆ ಎರಡೂ ಕಡೆಯವರು ಬಂದು, ಸಹಿ ಹಾಕಿದರು. ಅದರ ಮುಖ್ಯಾಂಶಗಳು ಹೀಗಿವೆ:

(1) ಗುಡ್ಡದ ಮೇಲೆ 14 ಗುಂಟೆ ಜಾಗವನ್ನು ಗೋರಿಗೆ ಮಂಜೂರು ಮಾಡುವುದು, ಮುಸ್ಲಿಮರು ಮೆಟ್ಟಿಲಿನ ದಾರಿಯ ಬೇಡಿಕೆಯನ್ನು ಕೈ ಬಿಡುವುದು, ಅವರಿಗೆ ಪಕ್ಕದ ಓಣಿಯೊಂದರ ಮೂಲಕ ಗುಡ್ಡಕ್ಕೆ ಹೋಗುವ ದಾರಿಯಲ್ಲಿ ಈಗಾಗಲೇ ಸುಮಾರು 10 ಸಾವಿರ ರೂ. ವೆಚ್ಚದಲ್ಲಿ ಒಂದಷ್ಟು ಮೆಟ್ಟಿಲುಗಳನ್ನು ಪುರಸಭೆ ಕಟ್ಟಿಸಿದ್ದು, ಅಲ್ಲಿ ಪೂರ್ತಿ ಮೆಟ್ಟಿಲು ಕಟ್ಟಿಸಿ ಕೊಡುವುದು; (ಇವಲ್ಲದೆ ಹಿಂಭಾಗದಿಂದ ಗುಡ್ಡಕ್ಕೆ ತಾ|| ಕಛೇರಿಯ

(4ನೇ ಪುಟಕ್ಕೆ)

ಮೆಣಸಿನಹಾಡ್ಯದಲ್ಲೊಂದು ಸರ್ಕಾರಿ ಸಭೆ

(ಎರಡನೇ ಪುಟದಿಂದ)

ಜಿಲ್ಲೆಯ ಎಲ್ಲಾ ಗಿರಿಜನ ಕುಟುಂಬಗಳೂ ಇದಕ್ಕಿಂತ ಬಹಳ ಉತ್ತಮವಾಗಿರುತ್ತವೆ. ಗಿರಿಜನ ಅಭಿವೃದ್ಧಿ ಕೆಲಸಗಳಿಗೆ ಹಣದ ಕೊರತೆಯಿಲ್ಲ. ಆದರೆ ವಿವಿಧ ಸೌಲಭ್ಯ, ಯೋಜನೆಗಳ ಬಗ್ಗೆ ಅವರಿಗೆ ತಿಳುವಳಿಕೆ ನೀಡಿ, ಸಕಾಲದಲ್ಲಿ ಅವಶ್ಯಕತೆಯಿದ್ದಾಗಲೇ ಅವನ್ನು ದೊರಕಿಸಬೇಕು. ಅವಶ್ಯಕತೆಯಿಲ್ಲದಾಗ ಅವರಿಗೆ ಸಿಗದೆ ಯಾವಾಗಲೋ ಕೊಟ್ಟಂತೆ ಮಾಡಿ 'ಲೆಕ್ಕ ತೋರಿಸಿದರೆ ನಿರರ್ಥಕ" ಎಂದ ಮಾತು ಅರ್ಥಪೂರ್ಣವಾಗಿತ್ತಾದರೂ ಇದನ್ನು ಅವರ ಎಲ್ಲ ಅಧಿಕಾರಿಗಳೂ ಪಾಲಿಸುವಂತೆ ಮಾಡುವ ನೈತಿಕ ಬಲತೆಯ ಕೊರತೆ ವ್ಯಾಪಕವಾಗಿಯೇ ಇದೆ.

ವಾರ್ತಾ-ಪ್ರಚಾರ ಇಲಾಖೆಯ ಕಲಾವಿದರ ಜನಪದ ಗೀತೆ, 'ಲಾವಣಿ'ಗಳೂ ಸಹ ಅಲ್ಲಿನವರ ಆಶೋತ್ತರ, ಏಳ್ಗೆಯ ಮಾರ್ಗವುಗಳನ್ನು ಅರ್ಥಮಾಡಿಕೊಂಡಂತಿರುವುದಲ್ಲ, ಹಿಂದಿನಿಂದ ತಾವು ಇಟ್ಟುಕೊಂಡ ಸಿದ್ಧಪ್ರಬದ್ಧವಾದ ಯಾವುದೋ ತಿಳುವಳಿಕೆಯ ಪ್ರತಿರೂಪವಾಗಿದ್ದವು.(ಉದಾಹರಣೆಗೆ, ಹಿಂದಿನ ದುರಂತ ಕುರಿತ ಲಾವಣಿ ಇಲ್ಲಿನಂತೆ ಈಗ ಶ್ರೀಮಂತ, ಮಧ್ಯಮ ವರ್ಗಗಳ ಮನರಂಜನೆಗೇ ಹೆಚ್ಚು ಅನ್ವಯಿಸಿದವು!) 'ಲಾವಣಿ' ಎಂದು ನಮ್ಮ ಭಾಷೆಯಲ್ಲಿ ಹೇಳುವುದಾದರೆ 'ಚುಟುಕುಟ'ಯಂತಿದ್ದವು. ಇನ್ನು ಗಿರಿಜನರ ಕುರಿತ ಚಲನಚಿತ್ರಗಳು ಎಷ್ಟು ಅರ್ಥಪೂರ್ಣವಾಗಿ, ರಿಲೆವೆಂಟ್ ಆಗಿ ಇದ್ದವೂ ನೋಡುವ ಅವಕಾಶ ನಮಗೆ ಸಿಗಲಿಲ್ಲ.(ಬಹಳ ವೇಳೆಯಾಗುತ್ತೆಂದು ನಾವು ವಾಪ್ಸು ಬರಬೇಕಾಯಿತು.)

ಕೇಳುವ ಕಿವಿಯೂ ಬೇಕು

ಮಂತ್ರಿಗಳು, ಅಧಿಕಾರಿಗಳು ಹೀಗೆ ಹಳ್ಳಿಗಳಿಗೆಹೋದಾಗ ಜನರಿಂದ ಕೇಳುವುದಕ್ಕೆ ಹೆಚ್ಚು ಪ್ರಾಮುಖ್ಯಕೊಡಬೇಕು. ಇಲ್ಲಿ ಶೇಷಯ್ಯ, ಕೆಂಪಯ್ಯ ಮತ್ತು ಗೋಪಾಲ' ತಮ್ಮ ಮತ್ತು ತಮ್ಮವರ ಅನುಭವ, ಸಮಸ್ಯೆ ಆಕಾಂಕ್ಷೆಗಳನ್ನು ಕುರಿತು ಮಾತನಾಡಿದರು. ತಾವು ಎಷ್ಟೋ ಕಷ್ಟಗಳ ಮಧ್ಯೆ ಓದಿ ಹಾಗೂ ಹೀಗೂ ಪಾಸು ಮಾಡಿದರೂ ಸರ್ಕಾರಿ (ಖಾಯಂ) ಕೆಲಸ ಸಿಗದೆ ತಮ್ಮ ಕುಟುಂಬಗಳ ಆರ್ಥಿಕಸ್ಥಿತಿ ಉತ್ತಮವಾಗಲು ಅವಕಾಶವಿಲ್ಲದಿರುವುದನ್ನು ವಿವರಿಸಿದ ಗೋಪಾಲ್ ಇದಕ್ಕೆ ತನ್ನದೇ ಉದಾಹರಣೆ ಕೊಟ್ಟು ಮಾತನಾಡುತ್ತಿದ್ದಾಗ ಮಧ್ಯೆ ಪ್ರವೇಶಿಸಿದ ತಹಸೀಲ್ದಾರರು, ಸಾಮೂಹಿಕ ಸಮಸ್ಯೆಗಳಿದ್ದರೆ ಹೇಳಿ, ಒಬ್ಬನ ಸಮಸ್ಯೆಯನ್ನೇ ಹೇಳಬೇಡ ಎಂದು ಸೂಚಿಸಿದರು. ನಿಜವಾಗಿ ಇಲ್ಲಿ ಒಬ್ಬನ ಸಮಸ್ಯೆಯೇ ಎಲ್ಲರ ಸಮಸ್ಯೆಯೂ ಆಗುತ್ತದೆ.

ಹೀಗೆ ಸ್ಥಳೀಯ ಯುವಕರು ಮಾತನಾಡುತ್ತಿದ್ದರೆ ಮಂತ್ರಿಗಳು, ಹಿರಿಯ ಅಧಿಕಾರಿಗಳು ಪೂರ್ತಿ ಗಮನವಿಟ್ಟಂತೆ ಕಾಣಲಿಲ್ಲ. (ಗೋವಿಂದ ಗೌಡರು, ಜಿಲ್ಲಾಧಿಕಾರಿಗಳು ಸಾಮಾನ್ಯವಾಗಿ ಗಮನ ಕೊಡುತ್ತಾರೆ)ಅವರುಗಳು ಅಭ್ಯಾಸವಿಲ್ಲದ್ದರಿಂದ ಸುತ್ತಿ ಬಳಸಿ ಸ್ವಲ್ಪ ಅಗತ್ಯಕ್ಕಿಂತ ಹೆಚ್ಚು ಹೊತ್ತು ಮಾತಾಡಿರಬಹುದು. ಹಾಗೇ ಮಂತ್ರಿ-ಅಧಿಕಾರಿಗಳೂ (ಅಭ್ಯಾಸವಿಲ್ಲದ್ದರಿಂದ ಅಲ್ಲ,ಮಾತಾಡುವ ಚಟಕ್ಕಾಗಿ) ಮಾಡುವುದಿಲ್ಲವೆ? ಬಂದವರಿಗೆ ಹೋಗಲು ತಡವಾಗುತ್ತಿದ್ದಿರಬಹುದು. ಆದರೆ ಇಷ್ಟು ದೂರ ಹೋಗುವಾಗ ಜನರ ಮಾತು ಕೇಳಲು ಸ್ವಲ್ಪವಾದರೂ ಸಮಯಾವಕಾಶ ಇಟ್ಟುಕೊಳ್ಳದೆ ಕೇವಲ ನಿಮ್ಮ ಕೋಟಿ, ಲಕ್ಷ ಎಂಬ ಅಂಕಿ ಅಂಶಗಳನ್ನು ಸುರಿಸುಬರಲು ಮಾತ್ರ ಹೋದರೆ ಜನ ಕೇಳುತ್ತಾರೆಯೆ?

ಕೊಪ್ಪಕ್ಕೊಂದು ಇಂಗ್ಲಿಷ್ ಮಾಧ್ಯಮದ ನರ್ಸರಿ ಶಾಲೆ ಅಗತ್ಯವೆ?

ಮಾನ್ಯರೆ,

ನಿಮ್ಮ ಕಳೆದ ಸಂಚಿಕೆಯಲ್ಲಿ ಕೊಪ್ಪದಲ್ಲಿ ಈಚೆಗೆ ಸ್ಥಾಪಿತಗೊಂಡ ದಾಸಮಠವನ್ನು ಒಂದು ಸುಸಜ್ಜಿತ ವಿದ್ಯಾಕೇಂದ್ರವಾಗಿ ಬೆಳೆಸುವ ಯೋಜನೆಯಿರುವುದಾಗಿ ವರದಿಯಾಗಿತ್ತು. ಈ ಬಗ್ಗೆ ಹೆಚ್ಚಿಗೆ ವಿಚಾರ ತಿಳಿದಾಗ ಅಲ್ಲಿ ಇಂಗ್ಲಿಷ್ ಮಾಧ್ಯಮದ ನರ್ಸರಿ ಶಾಲೆಯೊಂದನ್ನು ಆರಂಭಿಸುವ ಆಲೋಚನೆ ಹೊಂದಿರುವುದಾಗಿ ತಿಳಿದುಬಂದಿದೆ. ಮುಂದೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣಗಳನ್ನೂ ಸಂಪೂರ್ಣ ಇಂಗ್ಲಿಷ್‌ಮಾಧ್ಯಮದಲ್ಲೇ ಆರಂಭಿಸುವ ಆಲೋಚನೆ ಕೂಡಾ ಇದೆಯೆಂದು ವದಂತಿ. ಇದು ನಿಜವಾಗಿದ್ದಲ್ಲಿ, ಕೊಪ್ಪದ ಜನತೆ ಎಚ್ಚೆತ್ತು ಆಲೋಚಿಸಬೇಕಾದ ಅವಶ್ಯಕತೆ ಇದೆ.

ಭಾಷೆಯ ವಿಷಯ ಬಂದಾಗ, ಧರ್ಮದ ವಿಷಯದಂತೆಯೇ ಭಾವಾವೇಶಕ್ಕೊಳಗಾಗುವ ಅಪಾಯ ಸಾಮಾನ್ಯ. ಆದರೆ ಇದನ್ನು ಭಾವಾವೇಶಕ್ಕೊಳಗಾಗದೆ, ಪ್ರಸಕ್ತ ಪರಿಸ್ಥಿತಿಯಲ್ಲಿ ಕೇವಲ ತಾತ್ಕಾಲಿಕ ಲಾಭವನ್ನು ಪರಿಗಣಿಸದೆ, ಈ ವಿಷಯದಲ್ಲಿ ಚರ್ಚೆ ಆಗಬೇಕು.

ದಕ್ಷಿಣ ಭಾರತೀಯರಾದ ನಮಗೆ ಹಿಂದಿಯೊಡನೆ ಇನ್ನಿ ಭಾರತೀಯರನ್ನು ಸಾಮಾಜಿಕ, ಸಾಂಸ್ಕೃತಿಕ ತಾದಾತ್ಮ್ಯತೆ ಮೂಡಿಬಂದಿಲ್ಲ. ಈ ಕಾರಣದಿಂದಾಗಿ ಹೊರ ಜಗತ್ತನ್ನು ಅರಿಯಲು ನಮಗೆ ಇಂಗ್ಲಿಷ್ ಭಾಷೆಯ ಒಡನಾಟ ಅವಶ್ಯಕ. ಹೊರ ಜಗತ್ತನ್ನು ಅರಿಯಲು ನಮಗೆ ಇರುವ [illegible] ಇಂಗ್ಲಿಷ್, ನಿಜ. ಆದರೆ ಮನೆಯಲ್ಲಿ [illegible] ಗೇಷ್ಟೇ ಪ್ರಾಧಾನ್ಯತೆ ಉಂಟಾದರೆ [illegible] ವನ್ನೇ ಅಲ್ಲ, ಅವಾಯ ಕೂಡ. [illegible] ನೆಷ್ಟು ಸುಲಭವಾಗಿ ಪ್ರತಿನಿಧಿ[illegible] ಸುಭದ್ರತೆ ಇರುವುದಿಲ್ಲ.

(4ನೇ ಪ[illegible]

ಶೃಂಗೇರಿಯ ಗೋರಿ ವಿವಾದಕ್ಕೆ ತೆರೆ

(3ನೇ ಪುಟದಿಂದ)

ಹೊಸ ಕಟ್ಟಡದ ಬಳಿಗೆ ಬರುವ ಲೋ॥ ಇಲಾಖೆಯ ಹೊಸ ರಸ್ತೆಯೂ ಇವರ ಬಳಕೆಗೆ ಸಿಗುತ್ತದೆ.)

(2)ಈ ಜಾಗ ಮಂಜೂರಾತಿಯ ಕೆಲಸ ಪೂರ್ತಿ ಆಗುವವರೆಗೆ ಭಾರತೀ ಟ್ರಸ್ಟ್‌ನವರಿಗೆ ಕಟ್ಟಡ ಕಟ್ಟಲು ಪುರಸಭೆ ಲೈಸೆನ್ಸ್ ನೀಡಬಾರದು.

(3) ನಂತರ, ಅವರು ಧರೆ ಕಡಿದ ಜಾಗಕ್ಕೆ ಕಲ್ಲಿನ ಕಟ್ಟಣ ಕಟ್ಟಿಕೊಡಬೇಕು. ಇದನ್ನು ಚಿಕ್ಕಮಗಳೂರು ಲೋ॥ ಇಲಾಖೆ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಸೂಚಿಸುವಷ್ಟು ಬಲಿಷ್ಠವಾಗಿ ಕಟ್ಟಬೇಕು ಹಾಗೂ ಅದನ್ನವರು ಪರಿಶೀಲಿಸಿ, ಗೋರಿಯ ಬಳಿಯ ನೆಲಕುಸಿಯದಿರಲು ಅಗತ್ಯವಿರುವಷ್ಟು ಭದ್ರವಾಗಿ ಕಟ್ಟಲಾಗಿದೆ ಎಂದು ಪ್ರಮಾಣಪತ್ರ ನೀಡಬೇಕು. ಅನಂತರವೇ ಕಲ್ಯಾಣ ಮಂಟಪ ಕಟ್ಟಲು ಭಾರತೀ ಟ್ರಸ್ಟ್‌ನವರಿಗೆ ಲೈಸೆನ್ಸ್ ನೀಡಬೇಕು.

ಇದನ್ನು ಮೀರಿ ಲೈಸೆನ್ಸ್ ನೀಡಿದಲ್ಲಿ ಯಾರಿಗೂ ತಿಳುವಳಿಕೆ ನೀಡದೆ ಲೈಸೆನ್ಸನ್ನು ಜಿಲ್ಲಾಧಿಕಾರಿ ರದ್ದುಪಡಿಸುತ್ತಾರೆ.

(4) ಹೈಕೋರ್ಟಿನಲ್ಲಿರುವ ವಿವಾದವನ್ನು ಹಿಂದಕ್ಕೆಪಡೆಯಬೇಕು.

ಕೋಡು ಮೇಲಾದ ರೀತಿ

ಈ ಒಪ್ಪಂದದಿಂದ, ಮುಸ್ಲಿಮರಿಗೆ ತಮ್ಮ ಧಾರ್ಮಿಕ ಶ್ರದ್ಧಾ ಕೇಂದ್ರಕ್ಕಿದ್ದ ಮುಂಬಾಗಿಲು ಮುಚ್ಚಿ ಹಿಂಬದಿಯಿಂದ ಪ್ರವೇಶಿಸುವ ಪರಿಸ್ಥಿತಿ ಉಂಟಾಗಿರುವುದೊಂದು ಬಿಟ್ಟರೆ ಉಳಿದಂತೆ ಅನ್ಯಾಯವಲ್ಲ, ನ್ಯಾಯವೇದೊರೆತಿದೆ. ಈಚೆ ಕಡೆಯವರಿಗೂ ತಮ್ಮ ಕೋಡು ಮೇಲಾಗಿದೆ (ಮುಂಬಾಗಿಲು ಮುಚ್ಚಿಸಿದ್ದಕ್ಕೆ.)

"ನಮಗೆ ಮೆಟ್ಟಿಲಲ್ಲದೆ ಬೇರೊಂದು ದಾರಿಯಿಂದ ಬರುವಂತಾದರೂ ಚಿಂತೆಯಿಲ್ಲ. ಗೋರಿಯ ಜಾಗ ಮುಖ್ಯ. ಅದು ಮಂಜೂರಾಗುತ್ತಾದ್ದರಿಂದ ಈ ಒಪ್ಪಂದಕ್ಕೆ ಒಪ್ಪಿದೆವು" ಎನ್ನುತ್ತಾರೆ ಮುಸ್ಲಿಮರು.

ಒಂದು ವೇಳೆ ಮೆಟ್ಟಿಲಿಗೆ ಇವರು ಜಾಗ ಬಿಟ್ಟುಕೊಟ್ಟು, ಅವರು, ವಂತಿಗೆ, ಕಟ್ಟಡ ಕೆಲಸ ಮುಂತಾಗಿ ಪಾಲ್ಗೊಂಡು ಕಲ್ಯಾಣ ಮಂಟಪ ತಲೆಯೆತ್ತಿರುತ್ತಿದ್ದರೆ ಕೋಮು ಸಾಮರಸ್ಯದ ಎಂಥ ಸುಂದರ ಚಿತ್ರ ಮೂಡುತ್ತಿತ್ತು ಎಂದು ಸ್ವಚ್ಛ ಮನಸ್ಸಿನ ಯಾರಿಗಾದರೂ ಅನಿಸೀತು. ಇದರಿಂದ, ತಮ್ಮ ಕೋಡು ಮೇಲಿಲ್ಲದಿದ್ದರೂ ಬೇರೆಯವರ ಕೋಡು ಮುರಿದಾದರೂ 'ತಮ್ಮ ಕೋಡು ಮೇಲೆ' ಎನ್ನಿಸಿಕೊಂಡಿದ್ದಕ್ಕಿಂತ ಹೆಚ್ಚೇನೂ ಸಾಧನೆಯಾಗಿಲ್ಲ, ಹೌದೆ?

ಪ್ರಕೃತಿನಿಯಮದ ವೈರಿಗಳಾದ ಕಪ್ಪೆ–ಹಾವುಗಳು ವೈರ ತೊರೆದು ಅನ್ಯೋನ್ಯವಾಗಿದ್ದ ಸ್ಥಳವೆಂದು ಹೆಮ್ಮೆ ಕೊಚ್ಚುವ ನಾವು ಅದೇ ಪ್ರಕೃತಿ ಸಹಜವಾದ ಮನುಷ್ಯ–ಮನುಷ್ಯರ ನಡುವಿನ ಪ್ರೀತಿ, ಸೌಹಾರ್ದಗಳನ್ನು ಮುರಿದು ಧರ್ಮೋದ್ಧಾರಕರೆಂದು ಬೀಗುತ್ತೇವೆ. ಎಷ್ಟೆಂದರೂ ನಾವು ಎಲ್ಲ ಹಿರಿಯರ (ಶಂಕರಾಚಾರ್ಯರಿರಲಿ, ಚಂದ್ರಶೇಖರ ಭಾರತಿಗಳಿರಲಿ, ಅಥವಾ ಪೈಗಂಬರ್, ಕ್ರಿಸ್ತ, ಗಾಂಧಿ, ಯಾರೇ ಇರಲಿ, ಅವರೆಲ್ಲರ) ತತ್ವ, ಆಶೋತ್ತರಗಳಿಗೂ ಗೋರಿ ತೋಡಿ, ಮೇಲೆ ಸ್ಮಾರಕ ಕಟ್ಟಿ ಅದನ್ನು ಪೂಜಿಸುತ್ತ ಬಂದಿರುವ ಆಸ್ತಿಕರು ತಾನೆ?

ಅಂತೂ ಈಗಲಾದರೂ ಎರಡು ಕಡೆಯವರೂ ಸಮಾಧಾನ ತಾಳಿ, ಇನ್ನು ಮುಂದಾದರೂ ಊರಲ್ಲಿ ಶಾಂತಿ ನೆಲೆಸಲು ಅವಕಾಶ ಕೊಡಬೇಕು.

ಮುಸ್ಲಿಮರೂ ತಿದ್ದಿಕೊಳ್ಳುವುದಿದೆ

ಈ ಇಡೀ ದೇಶದ ಬಗ್ಗೆ ಪ್ರೀತಿಯಿರುವವರು, ಈ ದೇಶದಲ್ಲಿ ಹುಟ್ಟಿ ಬೆಳೆದು ಬದುಕುವ ಎಲ್ಲರೂ ಈ ದೇಶದ ಪ್ರಜೆಗಳು ಎಂದು ಭಾವಿಸುವವರು ಶೃಂಗೇರಿಯಲ್ಲೂ ಅಪಾರ ಜನರಿದ್ದಾರೆ. ಎಲ್ಲರೂ ಕೋಮುವಾದಿಗಳಲ್ಲ. ಅವರೆಲ್ಲ, ತಮ್ಮ ಧಾರ್ಮಿಕ ಶ್ರದ್ಧೆ ಯಾವುದೇ ಇದ್ದರೂ ಬೇರೆಯವರ ಶ್ರದ್ಧೆಯನ್ನೂ ಮಾನ್ಯ ಮಾಡುತ್ತಾರೆ.

ತಮ್ಮ ತಮ್ಮ ಶ್ರದ್ಧೆಗನುಸಾರ ಪೂಜಾಸ್ಥಳ ಹೊಂದುವುದು ಎಲ್ಲರಿಗೂ ಇರುವ ಹಕ್ಕು, ಅದರಿಂದ ದೇಶದ್ರೋಹ ಆಗುವುದಿಲ್ಲ ಎಂದೂ ಇವರೆಲ್ಲ ಒಪ್ಪುತ್ತಾರೆ.

ಧಾರ್ಮಿಕ ಜಾತ್ರೆ, ಉತ್ಸವಗಳು ಎಲ್ಲಾ ಧರ್ಮ–ಕೋಮುಗಳವರಲ್ಲೂ ಇವೆ. ಒಂದು ಊರಿನ ಉತ್ಸವಕ್ಕೆ ನಾನಾ ಊರುಗಳಿಂದ ಜನ ಬರುವುದು ಸಹಜ. ಹೀಗೆ ಒಂದು ಕೋಮಿನ ಉತ್ಸವಕ್ಕೆ ಬೇರೆ ಊರಿನ ಆ ಕೋಮಿನವರು ಬಂದಾಗ ಗಲಾಟೆಗಾಗಿಯೇ ಕರೆಸಿದ್ದಾರೆ ಎಂದು ಪ್ರಚಾರ ಹಬ್ಬಿಸುವುದು ಹೀನ ಬುದ್ಧಿಯ, ರೋಗಗ್ರಸ್ತ ಮನಸ್ಸಿನ ನಡವಳಿಕೆ.

ಇಂಥ ಪ್ರಚಾರಗಳು ಕೋಮುವಾದಿ ವಿಷರಕ್ತದವರಲ್ಲದ ಮುಗ್ಧ ಜನರನ್ನೂ ತಟ್ಟುವುದಕ್ಕೆ ಮುಸ್ಲಿಮರ ದೋಷಗಳೂ ಕಾರಣವಿವೆ. ಅಂಥಾ ಶ್ರೇಷ್ಠ ಮಾನವತಾವಾದಿ ಮೊಹಮ್ಮದ್ ಪೈಗಂಬರರ ಬೋಧನೆಗಳನ್ನು ಯದ್ವಾತದ್ವಾ ಅರ್ಥೈಸಿ, ರಾಷ್ಟ್ರೀಯ ಅಥವಾ ಇಡೀ ಜಗತ್ತಿನ ಸಮಸ್ಯೆಯಾದ ಜನಸಂಖ್ಯಾ ನಿಯಂತ್ರಣವನ್ನು ವಿರೋಧಿಸುತ್ತಿರುವುದು, ತಮ್ಮ ಮಹಿಳೆಯರನ್ನು ಕತ್ತಲ ಕೂಪದಲ್ಲಿಟ್ಟು, ತಮ್ಮ ಮಕ್ಕಳಿಗೆ ಸಾರ್ವತ್ರಿಕ ವಿದ್ಯಾಭ್ಯಾಸಕ್ಕೆ ಗಮನ ನೀಡದೆ ತನ್ಮೂಲಕ ಜನಾಂಗ ಇತರರೊಡನೆ ಮುಕ್ತವಾಗಿ ಬೆರೆಯಲು ಅವಕಾಶ ತಪ್ಪಿಸಿರುವುದು—ಇವೆಲ್ಲ ಅವರ ಇಂದಿನ ದುಃಸ್ಥಿತಿಗೆ ಕಾರಣ. ಇವೇ ಅವರನ್ನು ಉಚ್ಚ ನಾಯಕರು ತಮ್ಮ ದುಷ್ಟ ನೀತಿ–ನಿಲುವುಗಳಿಗೆ, ಕೃತ್ಯಗಳಿಗೆ ಬೆಂಬಲವಾಗಿ ಮಾಡಿಕೊಂಡಿರುವುದಕ್ಕೂ, ಬೇರೆಯವರು ಅವರನ್ನು ಅರ್ಥ ಮಾಡಿಕೊಳ್ಳದೆ ಅನುಮಾನಿಸುವಂತಾಗಿರುವುದಕ್ಕೂ ಕಾರಣ.

ಈ ಊರಿನ ಮುಸ್ಲಿಮರಾದರೂ ಇದನ್ನೆಲ್ಲ ಅರ್ಥ ಮಾಡಿಕೊಂಡು, ಭಾರತದೇಶದ ಸಮಾಜದೊಳಗೆ ಬೆರೆಯುವ ಬಗೆಯನ್ನು ರೂಢಿಸಿ, ಬೇರೆಯವರಿಗೆ ಮೇಲ್ಪಂಕ್ತಿಯಾಗುವ ದಿನ ಬಂದೀತೆ ಎಂದು ನಮ್ಮೆಲ್ಲರ ಆಸೆ.

ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಿಗೆ ಪ್ರವೇಶ

ಕೊಪ್ಪ: ಹಿಂದುಳಿದ ಜಾತಿ/ವರ್ಗ ಹಾಗೂ ಅಲ್ಪಸಂಖ್ಯಾತರ ವಿದ್ಯಾರ್ಥಿ ನಿಲಯ (ಕೊಪ್ಪ ಟೌನ್), ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ ಮತ್ತು ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯಗಳು (ಬಾಳಗಡಿ), ಕಮ್ಮರಡಿ ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ ಇವುಗಳನ್ನು 1985 ರ ಜೂನಿನಿಂದ ಆರಂಭಿಸಲಾಗುವುದು. ವಿದ್ಯಾರ್ಥಿಗಳ ಸಂಖ್ಯೆ ಮತ್ತು ಭರ್ತಿ ಮಾಡುವ ವಿಧಾನ ಇವು ಸರ್ಕಾರದಿಂದ ನಿಗದಿಪಡಿಸಿದ ಪ್ರಮಾಣಕ್ಕನುಗುಣವಾಗಿರುತ್ತವೆ. ಅರ್ಜಿಗಳನ್ನು ಮೇ 2 ನೇ ತಾರೀಖಿನಿಂದ ಕೊಪ್ಪದ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಚೇರಿಯಲ್ಲಿ ನೀಡಲಾಗುತ್ತಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಕ್ಷೇತ್ರಾಭಿವೃದ್ಧಿ ಕಚೇರಿಯಲ್ಲಿ ಸಲ್ಲಿಸಲು ಕಡೇ ದಿನ 28–5–85. ಹೆಚ್ಚಿನ ಮಾಹಿತಿಗೆ ಸದರಿ ಕಚೇರಿಯಲ್ಲಿ ವಿಚಾರಿಸಬಹುದು.

ಕಾಚಕಲ್‌ನಲ್ಲಿ ಸಚಿವರಿಗೆ ಅಭಿನಂದನಾ ಸಭೆ

ಕಾಚಕಲ್: ಇಲ್ಲಿನ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಏ. 30 ರಂದು ಮಂತ್ರಿ ಗೋವಿಂದ ಗೌಡರಿಗೆ ಅಭಿನಂದನಾ ಸಭೆಯನ್ನು ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ತಹಸೀಲ್ದಾರರು, ಲೋಕೋಪಯೋಗಿ, ಅರಣ್ಯ, ಕ್ಷೇತ್ರಾಭಿವೃದ್ಧಿ ಮತ್ತು ವಿದ್ಯಾ ಇಲಾಖೆಗಳವರು ಹಾಗೂ ಜನತಾ ಪಕ್ಷದ ಅಧ್ಯಕ್ಷರು ಮತ್ತು ಸಹೋದ್ಯೋಗಿಗಳು ಭಾಗವಹಿಸಿದ್ದರು. ಇವರೆಲ್ಲರನ್ನೂ ಎಸ್. ಜಿ. ಸುಬ್ರಮಣ್ಯ ಸ್ವಾಗತಿಸಿ ಮನವಿ ಓದಿದರು. ಸಚಿವರು ಕೆಲವು ಅರ್ಜಿಗಳನ್ನು ಪರಿಶೀಲಿಸಿ, ಸ್ಥಳದಲ್ಲೇ ಮಂಜೂರು ಮಾಡಿದರು. ಕೊನೆಯಲ್ಲಿ ಶಾಲಾ ಉಪಾಧ್ಯಾಯರಾದ ಎಮ್. ಹಿರಿಯಣ್ಣಪ್ಪ ಎಲ್ಲರಿಗೂ ವಂದನೆ ಸಲ್ಲಿಸಿದರು.

ಕೊಪ್ಪಕ್ಕೊಂದು ಇಂಗ್ಲಿಷ್ ನರ್ಸರಿ .... ?

(ಮೂರನೇ ಪುಟದಿಂದ)

ಈಗ ನಮ್ಮ ರಾಜ್ಯದಲ್ಲಿ ಆಗಿರುವುದಾದರೂ ಇದೇ ತಾನೇ? ಭಾಷಾವಾರು ಆಧಾರದ ಮೇಲೆ ಪ್ರಾಂತ್ಯಗಳ ವಿಂಗಡಣೆಯಾಗಿ ಇಷ್ಟು ವರ್ಷಗಳಾಗಿದ್ದರೂ, ಕನ್ನಡವನ್ನು ಆಡಳಿತ ಭಾಷೆ ಮಾಡಲು ಮೀನ ಮೇಷ ಎಣಿಸಿ, ಇಂಗ್ಲಿಷನ್ನು ತಲೆಯ ಮೇಲೆ ಕೂರಿಸಿಕೊಂಡಿದ್ದರಿಂದ, ಕನ್ನಡಿಗರ ರಾಜಧಾನಿ ಬೆಂಗಳೂರಿನಲ್ಲಿಯೇ, ಕನ್ನಡಿಗನಿಗೆ ನೌಕರಿ ಎಂದರೆ ಕನ್ನಡಿಯೊಳಗಿನ ಗಂಟಾಗಿದೆ.

ವೇದಿಕೆ

ಇಂಗ್ಲಿಷ್‌ಮಾಧ್ಯಮ ಶಾಲೆಯೆಂದರೆ. (ಒಂದು ವೇಳೆ ಡೊನೇಶನ್ ಇಲ್ಲ ಎಂದರೂ ಸಹ) ಆರ್ಥಿಕವಾಗಿ ಕೆಲವೇ ಜನರ ಕೈಗೆಟಕುವಂಥಾ ಒಂದು ವ್ಯವಸ್ಥೆಯಾಗಿರುತ್ತದೆ. ಈ ಶಾಲೆಯಲ್ಲಿ ಕಲಿಯುವ ಮಕ್ಕಳು, ನಡೆ ನುಡಿಯಲ್ಲಿ ಕೃತಕ ಅನುಕರಣೆ ಮಾಡಲಾರಂಭಿಸಿದಾಗ, ಉಳಿದ ಮಕ್ಕಳು ಬೆರಗುಗಣ್ಣಿನಿಂದ ಅವರನ್ನು ನೋಡುತ್ತವೆ. ಇದು ಸಾಮಾಜಿಕ ತಾರತಮ್ಯವನ್ನು, ಅಂಧಾನುಕರಣೆ ಹಾಗೂ ನೈಚ್ಯಾನುಸಂಧಾನಗಳನ್ನು ಹುಟ್ಟು ಹಾಕುವುದರಲ್ಲಿ ಮಾತ್ರ ಯಶಸ್ವಿಯಾಗುತ್ತದೆ. ಈ ಎಳೆಯರಲ್ಲಿ ವರ್ಗ ವೈಷಮ್ಯವನ್ನುಂಟುಮಾಡುವಂಥಾ ವ್ಯವಸ್ಥೆಯೊಂದು ನಮಗೆ ಬೇಕೇ?

ಇವತ್ತು ನಮ್ಮ ದೇಶದಲ್ಲಿ ಪ್ರತಿಭಾ ಪಲಾಯನ ಒಂದು ಸಮಸ್ಯೆ ಆಗಿದೆ. ಇದಕ್ಕೆ ಇಂಗ್ಲೀಷ್ ಮಾಧ್ಯಮದ ವಿಧ್ಯಾಭ್ಯಾಸವೇ ಕಾರಣ ಎಂದು ನನ್ನ ಅಭಿಪ್ರಾಯ. ಈ ಇಂಗ್ಲೀಷ್ ಮಾಧ್ಯಮದಲ್ಲೇ ಬೆಳೆದ ವಿಧ್ಯಾರ್ಥಿ, ಅಂಧಾನುಕರಣೆಗೆ ಮಾರು ಹೋಗಿ, ತನ್ನ ಪರಿಸರವನ್ನು, ಬೇರುಗಳನ್ನು ಮರೆಯುತ್ತಾನೆ. ದೇಶಿಯವಾದದ್ದೆಲ್ಲಾ ಅವನಿಗೆ ಅಸಹ್ಯವಾಗತೊಡಗಿ, ಕ್ರಮೇಣ ತನ್ನ ಪರಿಸರದಲ್ಲಿ ಪರಕೀಯನಾಗುತ್ತಾನೆ. ಆತ ವಿದೇಶಕ್ಕೆ ಹೋಗುವುದು ಕೇವಲ ಹಣ ಮತ್ತು ಕೀರ್ತಿ ಗಳಿಸ ಬೇಕೆನ್ನುವ ಉದ್ದೇಶದಿಂದಲ್ಲ. ಇಲ್ಲಿನ ಸಂಸ್ಕೃತಿಯಿಂದ ದೂರವಾದ ಆತ ಇಲ್ಲಿ ತನ್ನ ಬದುಕನ್ನು ಅಸಹನೀಯ ಮಾಡಿಕೊಂಡಿರುತ್ತಾನೆ, ಹೀಗಾಗಿ ಪಲಾಯನ ಆತನಿಗೆ ಅನಿವಾರ್ಯ.

ಈಗಿನ ಇಂಗ್ಲೀಷ್ ಶಿಕ್ಷಣ ಕ್ರಮದಲ್ಲಿ ಸುಧಾರಣೆ ಅಗತ್ಯ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಯೊಬ್ಬ, ವ್ಯಾಕರಣ ದೋಷವಿಲ್ಲದೇ ಒಂದೇ ಒಂದು ಪ್ಯಾರಾ ಕೂಡ ಇಂಗ್ಲೀಷ್‌ನಲ್ಲಿ ಬರೆಯಲಾರ ಎನ್ನುವಷ್ಟರ ಮಟ್ಟಿಗೆ ಇಂಗ್ಲೀಷ್ ಶಿಕ್ಷಣವಿದೆ. ಈ ಕಾರಣದಿಂದ, ನರ್ಸರಿ ಮಟ್ಟದಲ್ಲೇ ಇಂಗ್ಲೀಷನ್ನು, ಮಗುವಿಗೆ ಹೊರೆಯಾಗದಂತೆ, ಪರಿಚಯಿಸುವುದಾದರೆ (ಕನ್ನಡದ ಜೊತೆಗೆ), ಅಂತಹ ಕ್ರಮಕ್ಕೆ ಸ್ವಾಗತವಿದೆ. ಆದರೆ ಸಂಪೂರ್ಣ ಇಂಗ್ಲೀಷ್ ಮಾಧ್ಯಮದಿಂದ, ಇಂಗ್ಲೀಷ್ ವಸಾಹತುವೊಂದನ್ನು ಕೊಪ್ಪದಲ್ಲಿ ಸ್ಥಾಪಿಸುವುದಕ್ಕೆ ಅವಕಾಶ ಕೊಡುವುದು ಸರಿಯೇ ಎಂಬುದನ್ನು ನಾಗರೀಕರೆಲ್ಲರೂ ಯೋಚಿಸಬೇಕು.

ದಾಸಮಠ, ದಾಸ್ಯಮನೋಭಾವ ಬೆಳೆಸುವ ಮಠವಾಗದಿರಲಿ ಎಂಬುದೇ ನಮ್ಮ ಕಳಕಳಿ.

ಕ. ನ. ಕೃಷ್ಣಮೂರ್ತಿ,
ಮೇಲಿನಪೇಟೆ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.